ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 259/2022

(ಪ್ರಾಸಾ-8 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 29.10.2024

| | | |
|---|---|---|
| ಸಾಕ್ಷಿದಾರರ ಹೆಸರು | - | ವಿ. ಕೆ. ಮೂರ್ತಿ |
| ತಂದೆಯ ಹೆಸರು | - | ಕಣ್ಣನ್ |
| ವಯಸ್ಸು | - | 45 ವರ್ಷ, |
| ಉದ್ಯೋಗ | - | ಕಸ ವಿಲೇವಾರಿ, ಹುಳಿಮಂಗಳ ಗ್ರಾಮ ಪಂಚಾಯ್ತಿ |
| ವಾಸ | - | ಶಿಕಾರಿಪಾಳ್ಯ, ಗೊಲ್ಲಹಳ್ಳಿ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಕಳೆದ ಎಂಟು ವರ್ಷಗಳಿಂದ ಹುಳಿಮಂಗಳ ಗ್ರಾಮ ಪಂಚಾಯ್ತಿ ಕಸವಿಲೇವಾರಿ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಈಗ ಸುಮಾರು 2-3 ವರ್ಷಗಳ ಹಿಂದೆ ಬೆಳಗ್ಗೆ 07.30-08.00 ಘಂಟೆಗೆ ನಾನು ಕಸವನ್ನು ಅನ್ ಲೋಡ್ ಮಾಡಲು ಹುಳಿಮಂಗಳದ ತಿಮ್ಮಾರೆಡ್ಡಿರವರ ಮನೆಯ ಹಿಂಭಾಗದಲ್ಲಿರುವ ಬಂಡೆಯ ಹತ್ತಿರ ಗುಂಡಿಯಲ್ಲಿ ಕಸ ಹಾಕಲು ಹೋಗಿದ್ದಾಗ ಅಲ್ಲಿ ಒಂದು ಹೆಣ ಇತ್ತು. ಆಗ ಅಲ್ಲಿ ಪೋಲಿಸರು ಇದ್ದರು.

2. ಅದರ ಹಿಂದಿನ ದಿನ ಸಂಜೆ 4 ಘಂಟೆ ಸಮಯದಲ್ಲಿ ಅಲ್ಲಿ ನಾಲ್ವರು ಮೀನು ಹಿಡಿಯುತ್ತಿದ್ದರು ಹಾಗೂ ಬಟ್ಟೆ ತೊಳೆಯುತ್ತಿದ್ದರು. ಆ ನಾಲ್ವರಲ್ಲಿ ಒಬ್ಬರ ಹೆಣವನ್ನು ನಾನು ಮರುದಿನ ನೋಡಿದ್ದು ಇದೆ. ಸದರಿ ಶವವು ನೀರಿನಲ್ಲಿ ತೇಲುತ್ತಿತ್ತು. ಆತನು ಯಾವ ಕಾರಣಕ್ಕಾಗಿ ತೀರಿಕೊಂಡನು ಹಾಗೂ ಆತನ ಹೆಸರು ಹಾಗೂ ವಿಳಾಸ ಎಂದು ನನಗೆ ನಂತರವೂ ತಿಳಿಯಲಿಲ್ಲ. ಸದರಿ ಹೆಣವನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-7 ಫೋಟೋವನ್ನು ತೋರಿಸಲಾಗಿ ನಾನು ಆ ದಿನ ಬೆಳಗ್ಗೆ ನೋಡಿದ ಮೃತ ದೇಹ ಇದೇ ಎಂದು ಹೇಳಿ ಗುರುತಿಸುತ್ತಾರೆ.

3. ಸಾಕ್ಷಿ ಈಗ ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-15 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರ್ತಿಸಲಾಯಿತು. ಪೋಲಿಸರು ನಾನು ಗಾಡಿ ಓಡಿಸುತ್ತಿದ್ದಾಗ ದೂರಿಗೆ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ.

4. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಪಂಚನಾಮೆ ಇದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಪೋಲಿಸರು ಸ್ಥಳಕ್ಕೆ ಬಂದಾಗ ಏನು ಮಾಡಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಪೋಲಿಸರು ವೇಸ್ಟ್ ಬಟ್ಟೆಗಳನ್ನು ಶವದ ಮೇಲೆ ಹಾಕಿ ಸುಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-6 ಪಂಚನಾಮೆ ಸಮಯದಲ್ಲಿ ಪೋಲಿಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ. ನಿಪಿ-6 ಕ್ಕೆ ನಾನು ಸಹಿ ಹಾಕುವಾಗ ಬೇರೆ ಯಾರು ಇರಲಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

5. ನಾನು ಸ್ಥಳದಲ್ಲಿ ಶವವನ್ನು ನೋಡಿದಾಗ ಪೋಲಿಸರಿಗೆ ಮಾಹಿತಿ ನೀಡಿದ್ದು ನಂತರವೇ ಪೋಲಿಸರು ಸ್ಥಳಕ್ಕೆ ಬಂದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಪಿಡಿಓರವರ ನಿರ್ದೇಶನದಂತೆ ನಿಪಿ-15 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ.

6. ನಿಪಿ-6 ಪಂಚನಾಮೆ ಸಮಯದಲ್ಲಿ ನನ್ನ ಸಮಕ್ಷಮ ಪೋಲಿಸರು ಸುಟ್ಟ ಬಟ್ಟೆಯ ಚೂರುಗಳು, ಶವದ ಬಲಗಾಲಿನಲ್ಲಿದ್ದ ರಬ್ಬರ್ ಶೂ, ಒಂದು ಕಾಲಿನ ಸಾಕ್ಸ್, ಎಡಗಾಲಿನ ಬಳಿ ಸುಟ್ಟು ಹೋಗಿರುವ ಮುಂಭಾಗದ ಶೂನ ಚೂರುಗಳು, ಎರಡು ಸೀಳಿದಂತೆ ಇರುವ ಕಾಡು ಜಾತಿಯ ಮರದ ಪೀಸುಗಳು ಕಂಡುಬಂದಿದ್ದು ಅದರಲ್ಲಿ ಒಂದನ್ನು

ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. 13 ಇಂಚು ಉದ್ದ ಒಂದು ಮುಕ್ಕಾಲು ಸುತ್ತಳತೆ ಇರುವ ಅಲ್ಲಲ್ಲಿ ರಕ್ತಕಲೆಯಾಗಿರುವ ಸೀಳಿದಂತೆ ಇರುವ ಮರದ ತುಂಡು, ಕಾಡು ಜಾತಿಗೆ ಸೇರಿದ 28 ಇಂಚು ಉದ್ದ ಮೂರುವರೆ ಇಂಚು ಸುತ್ತಳತೆ ಅಲ್ಲಲ್ಲಿ ರಕ್ತಕಲೆಯಾಗಿರುವ ಮರದ ತುಂಡು ಗಳನ್ನು ಸಹ ನನ್ನ ಸಮಕ್ಷಮ ಪೋಲಿಸರು ಜಪ್ತಿಪಡಿಸಿಕೊಂಡರು ಎಂದರೆ ನಾನು ನೋಡಿಲ್ಲ.

7. ನಿಪಿ-7 ರಲ್ಲಿರುವ ಶವವನ್ನು ನಾನು ಸದರಿ ದಿನ ಅದೇ ಸ್ಥಿತಿಯಲ್ಲಿ ನೋಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪೋಲಿಸರು ನನಗೆ ನೋಡಲು ಬಿಡಲಿಲ್ಲ ಎಂದು ಹೇಳುತ್ತಾರೆ.

8. ನಂತರ ನನಗೆ ಸದರಿ ಶವದ ಹೆಸರು, ವಿಳಾಸ ಮತ್ತು ಸಾವಿಗೆ ಕಾರಣ ತಿಳಿದುಬಂತು ಎಂದರೆ ಸರಿಯಲ್ಲ. ಅದರಂತೆ ನಾನು ದಿಃ22.01.2022 ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ "ಕೂಡಲೇ ನಾನು ಈ ವಿಚಾರವನ್ನು --------------------- ಕಾನೂನಿನ ರೀತಿ ಕ್ರಮ ಕೈಗಳೊಳ್ಳಬೇಕೆಂದು ಕೋರುತ್ತೇನೆ" ಎಂದು ನಾನು ಪೋಲಿಸರಿಗೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಭಾಗವನ್ನು ನಿಪಿ-16 ಎಂದು ಗುರ್ತಿಸಲಾಯಿತು.

9. ನಾನು ಸದರಿ ದಿನ ಶವವನ್ನು ನೋಡಿದಾಗ ನಿಪಿ-7 ರಲ್ಲಿ ಕಂಡುಬಂದಂತಹ ಸ್ಥಿತಿಯಲ್ಲಿ ಶವ ಇತ್ತು ಎಂದರೆ ಸರಿಯಲ್ಲ. ಮೊದಲೇ ಶವವು ಸುಟ್ಟ ಸ್ಥಿತಿಯಲ್ಲಿದ್ದು ಪೋಲಿಸರು ಶವದ ಮೇಲೆ ಬಟ್ಟೆ ಹಾಕಿ ಸುಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

10. ನಿಪಿ-6 ರ ಸಮಯದಲ್ಲಿ ಶವದ ಮೇಲೆ ಇದ್ದ ಸುಟ್ಟ ಬಟ್ಟೆಗಳು, ಸುಟ್ಟು ಶೂ ಮತ್ತು ಮರದ ತುಂಡುಗಳನ್ನು ನನ್ನ ಮತ್ತು ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-6 ರಂತೆ ಪಂಚನಾಮೆ ಮಾಡಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಸಿ ಎಂ ವಕೀಲರಿಂದಃ**

11. ಶಿಕಾರಿಪಾಳ್ಯ ಮತ್ತು ಅಗ್ಬರ್ ನಗರದಲ್ಲಿ ಸುಮಾರು 5000 ಮನೆಗಳು ಇವೆ. ಬೆಳಗ್ಗೆ 06.30-07.00 ಘಂಟೆಗೆ ತ್ಯಾಜ್ಯ ಸಂಗ್ರಹ ಕೆಲಸವನ್ನು ಶುರು ಮಾಡುತ್ತೇವೆ. ಹಿಂದಿನ ದಿನ ಕಸ ತುಂಬಿದ ಗಾಡಿಯನ್ನು ಬೆಳಗ್ಗೆ ಕಸವನ್ನು ಹಾಕಿ ನಂತರ ಬಂದು ಮತ್ತೊಮ್ಮೆ ಕಸ ತ್ಯಾಜ್ಯಗಳನ್ನು ಸಂಗ್ರಹಿಸಿ ಅನ್ ಲೋಡ್ ಸುಮಾರು ಎರಡು ಘಂಟೆಗಳ ಕಾಲ ಬೇಕಾಗುತ್ತದೆ.

12. ಶಿಕಾರಿಪಾಳ್ಯವು ಹುಳಿಮಂಗಳದ ತಿಮ್ಮಾರೆಡ್ಡಿ ಮನೆ ಹಿಂಭಾಗದ ಗುಂಡಿಗೆ ಸುಮಾರು ಒಂದೂರವೆ ಕಿಮೀ ಅಂತರ ಇರುತ್ತದೆ. ಮಾರನಹಳ್ಳಿಯು ಸದರಿ ಗುಂಡಿಗೆ ಸುಮಾರು ಮುಕ್ಕಾಲು ಕಿಮೀ ಅಂತರದಲ್ಲಿ ಇರುತ್ತದೆ. ಪ್ರತಿನಿತ್ಯ 7 ರಿಂದ 8 ಲೋಡ್ ಕಸವನ್ನು ಡಂಪ್ ಮಾಡುತ್ತೇವೆ. ಶವ ಸಿಕ್ಕ ದಿನ ಬೆಳಗ್ಗೆ 7 ರಿಂದ ಸಂಜೆ 4 ಘಂಟೆಯವರೆಗೆ ಕಸ ವಿಲೇವಾರಿ ಕೆಲಸ ನಡೆಯಿತು. ಆ ದಿನ ನಾನು ಪೋಲಿಸ್ ಠಾಣೆಗೆ ಹೋಗಲಿಲ್ಲ. ಶವ ಸಿಕ್ಕ ಮರುದಿನ ಪೋಲಿಸರು ನನ್ನ ಸಹಿಯನ್ನು ದೂರಿನ ಮೇಲೆ ಪಡೆದರು. ನನಗೆ ಓದಲು ಬರೆಯಲು ಬರುವುದಿಲ್ಲ. ದೂರಿನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಪೋಲಿಸರು ನನ್ನ ಕೇಳಿದರು ಎಂದು ಹೇಳುತ್ತಾರೆ. ಎರಡು ಸಹಿಗಳನ್ನು ಪೋಲಿಸರು ಊರಿನಲ್ಲಿ ಕಸ ಸಂಗ್ರಹಣೆ ಮಾಡುವಾಗ ಪಡೆದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದು ಸಹಿಯನ್ನು ಊರಿನಲ್ಲಿ ಬೇಕರಿ ಹತ್ತಿರ ಇನ್ನೊಂದು ಸಹಿಯನ್ನು ಕಸ ಡಂಪ್ ಮಾಡುವ ಸ್ಥಳದಲ್ಲಿ ಪಡೆದರು ಎಂದು ಹೇಳುತ್ತಾರೆ. ಊರಿನಲ್ಲಿ ಬೇಕರಿ ಹತ್ತಿರ ಮತ್ತು ಕಸ ಡಂಪ್ ಮಾಡುವ ಸ್ಥಳದಲ್ಲಿ ಪೋಲಿಸರು ನನ್ನ ಸಹಿಗಳನ್ನು ಪಡೆಯುವಾಗ ನಾನು ಮತ್ತು ನನ್ನ ಹೆಲ್ಪರ್ ಮಾತ್ರ ಇದ್ದೆವು.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿಕೆ ವಕೀಲರ ಪರ**

**ಕುಮಾರಿ ಪಿಕೆ ವಕೀಲರಿಂದಃ**

13. ಪೋಲಿಸರು ದೂರು ಕೊಡಲು ಹೇಳಿದಾಗ ದೂರು ಕೊಟ್ಟಿದ್ದೇನೆ ಎಂದರೆ ಪಿಡಿಒ ದೂರು ಕೊಡಲು ಹೇಳಿದ ಮೇರೆಗೆ ನಾನು ದೂರು ಕೊಟ್ಟಿರುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಪಂಚನಾಮೆಗೆ ಸಾಕ್ಷಿಯಾಗಲು ಪೋಲಿಸರು ನನಗೆ ನೋಟೀಸ್ ಕೊಟ್ಟಿಲ್ಲ. ನಾನು ಪಂಚನಾಮೆಗೆ ಸಹಿಯನ್ನು ಸ್ಥಳದಲ್ಲಿ ಮಾಡಿರದೇ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. (2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಮುಂದುವರಿದ ಪಾಟೀ ಸವಾಲಾಗಿ ಅಳವಡಿಸಿಕೊಳ್ಳುವುದಾಗಿ ನಿವೇದಿಸಿದ್ದಾರೆ).

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು